## ಸಂಭ್ರಮಕ್ಕೆ ಮುನ್ನುಡಿ

—ಲಕ್ಷ್ಮಿ ಗೋಪಾಲಸ್ವಾಮಿ, ನಟಿ, ಭರತನಾಟ್ಯ ಕಲಾವಿದೆ



ಬೇಂದ್ರೆ ಅವರ ‘ಶ್ರಾವಣ ಬಂತು ಕಾಡಿಗೆ, ಬಂತು ನಾಡಿಗೆ, ಬಂತು ಬೀಡಿಗೆ’ ಹಾಗೂ ರಾಜಕುಮಾರ್ ಹಾಡಿರುವ ‘ಶ್ರಾವಣ ಮಾಸ ಬಂದಾಗ’ ಹಾಡುಗಳು ನನಗೆ ಶ್ರಾವಣ ಎಂದ ತಕ್ಷಣ ನೆನಪಾಗುತ್ತವೆ.

ಹಾಡುಗಳು, ಕರ್ನಾಟಕ ಸಂಗೀತ ಕಛೇರಿಗಳು, ಸಂಭ್ರಮ... ಹೀಗೆ ನನ್ನ ಶ್ರಾವಣದ ನೆನಪುಗಳು. ಆದರೆ ಈ ಆಧುನಿಕತೆ ಎಲ್ಲ ದಿನಗಳನ್ನೂ ಒಂದೇ ಎನ್ನುವಂತೆ ಮಾಡಿದೆ. ಈಗ ಆಷಾಢ, ಶ್ರಾವಣಕ್ಕೆ ವ್ಯತ್ಯಾಸ ಇಲ್ಲದಂತೆ ಆಗಿದೆ. ನನ್ನ ಬಾಲ್ಯದಲ್ಲಿ ಶ್ರಾವಣ ಮಾಸ ಅಂದರೆ ಮದುವೆಯ ದಿನಗಳು ನೆನಪಾಗುತ್ತವೆ. ಈ ಹಿಂದೆ ಆಷಾಢದಲ್ಲಿ ಮದುವೆ, ಇತ್ಯಾದಿ ಶುಭ ಕಾರ್ಯಗಳ ಬಗ್ಗೆಯೇ ಮಾತನಾಡುತ್ತಿರಲಿಲ್ಲ. ಶ್ರಾವಣದಲ್ಲಿ ಎಲ್ಲೆಡೆ ಪೂಜೆ, ಪುನಸ್ಕಾರಗಳು ನಡೆಯುತ್ತಿದ್ದವು. ಮಲ್ಲಿಗೆ ಹೂ ಮುಡಿದು ಸೀರೆ ತೊಟ್ಟು ಹೆಣ್ಣು ಮಕ್ಕಳು ಲಘುಬಗೆಯಲ್ಲಿ ಓಡಾಡುತ್ತಿದ್ದರು. ಆದರೆ ಕಾಲಾಂತರದಲ್ಲಿ ಈ ಬಗೆಯ ಆಚರಣೆಗಳು ಸ್ವಲ್ಪ ಮಟ್ಟಿಗೆ ತಗ್ಗಿವೆ.

ನನಗೆ ವೈಯಕ್ತಿಕವಾಗಿ ವಾತಾವರಣ ತಣ್ಣಗಿದ್ದು ಹಿತವಾಗಿದ್ದರೆ ಎಲ್ಲ ದಿನವೂ ಶ್ರಾವಣವೇ ಎನಿಸುತ್ತದೆ. ನಾನು ತುಂಬಾ ಸಂಪ್ರದಾಯಸ್ಥಳೇನೂ ಅಲ್ಲ. ವ್ರತಗಳನ್ನೇನೂ ಮಾಡಲ್ಲ.

ಶ್ರಾವಣ ಅಂದರೆ ಸಂಭ್ರಮಕ್ಕೆ ಮುನ್ನುಡಿ ಎಂದರೂ ತಪ್ಪಿಲ್ಲ. ಶ್ರಾವಣ ಮಾಸದಲ್ಲಿ ಸಾಲು ಸಾಲು ಹಬ್ಬಗಳು ಬರುತ್ತವೆ. ಈ ಹಿನ್ನೆಲೆಯಲ್ಲಿ ನೋಡುವುದಾರೆ ಹಬ್ಬಗಳ ಸೊಬಗಿಗೆ ಶ್ರಾವಣ ಮುನ್ನುಡಿ ಆಗುತ್ತದೆ. ಶ್ರಾವಣ ಮಳೆ ಬರುವ ಕಾಲ. ನಾಡಿನ ಬಹುತೇಕ ಕಡೆಗಳಲ್ಲಿ ಕುಡಿಯುವ ನೀರು ಸಹ ದೊರೆಯುತ್ತಿಲ್ಲ. ಇಂತಹ ಸಮಯದಲ್ಲಿ ಶ್ರಾವಣ ಮಾಸ ನಮಗೆ ಮಳೆಯನ್ನು ಹೊತ್ತು ತರುವ ಉತ್ತಮವಾದ ಸಮಯವಾಗಿದೆ.

ಆಚರಣೆಗಳಿಂದ ಮುಕ್ತರಾಗಿದ್ದೇವೆಯೇ? ಈ ಪ್ರಶ್ನೆಗಳಿಗೆ ನೀಡಬಹುದಾದ ಉತ್ತರಗಳೇ ಶ್ರಾವಣದ ಪ್ರಸ್ತುತತೆಯನ್ನೂ ಸೂಚಿಸಬಲ್ಲವು.

ಇವತ್ತಿನ ಸಂದರ್ಭ ನೋಡಿ. ಮಳೆಗಾಲದ ಉತ್ಕರ್ಷದ ದಿನಗಳಲ್ಲೂ ನಾಡಿನ ಅನೇಕ ಕಡೆಗಳಲ್ಲಿ ಬರದ ಛಾಯೆಯಿದೆ. ಬಿತ್ತನೆ ಕಾಲ ಮುಗಿದರೂ, ಅನೇಕ ಹೊಲಗಳಲ್ಲಿ ನೇಗಿಲಗೆರೆಯೂ ಮೂಡಿಲ್ಲ. ಅಂತರ್ಜಲದ ಮಟ್ಟ ಪಾತಾಳಕ್ಕಿಳಿಯುತ್ತಿದೆ. ‘ಇದು ಬರಿ ನೀರಲ್ಲ, ಹಾಲಿನ ತೊರೆ’ ಎನ್ನುವ ಕವಿಕಾಣ್ಕೆಯ ಸಂಭ್ರಮ ಈ ಹೊತ್ತಿನ ನದಿಗಳಲ್ಲಿ ಕಾಣಿಸುತ್ತಿಲ್ಲ. ಇದೆಲ್ಲ ಪ್ರಕೃತಿಯ ಮಾತಾಯಿತು. ನಮ್ಮ ಬದುಕಿನಲ್ಲೂ ಸಂಭ್ರಮಕ್ಕೆ ಹೆಚ್ಚಿನ ಕಾರಣಗಳಿಲ್ಲ. ನಾಡಿನ ಏಳಿಗೆಗೆ ಕಾರಣವಾಗಬೇಕಾದ ರಾಜಕಾರಣ ಸ್ವಾರ್ಥ–ಭ್ರಷ್ಟತೆಯ ಪರಾಕಾಷ್ಠೆ ತಲುಪಿದೆ. ಸಮುದಾಯಗಳ ನಡುವೆಯೂ ನಂಜು ಕಾಣಿಸಿಕೊಂಡಿದೆ. ಇಂಥ ವಿಷಮ ಸನ್ನಿವೇಶದಲ್ಲಿ ‘ಶ್ರಾವಣ ಬಂತು ನಾಡಿಗೆ, ಕಾಡಿಗೆ, ಬೀಡಿದೆ’ ಎಂದು ಹಾಡುವುದು ಕ್ಲೀಷೆಯಲ್ಲವೇ?

ಎಂಥ ದುಸ್ತರ ಸಂದರ್ಭದಲ್ಲೂ ಬದುಕು ಆಸರೆಯೊಂದನ್ನು, ಭರವಸೆಯೊಂದನ್ನು ಹುಡುಕುತ್ತಿರುತ್ತದೆ. ಅಂಥದೊಂದು ಭರವಸೆಯ ರೂಪದಲ್ಲಿ ಶ್ರಾವಣವನ್ನು ಕಾಣಲಿಕ್ಕೆ ಸಾಧ್ಯವಿದೆ. ವರ್ತಮಾನದ ಗೊಂದಲ ಹಾಗೂ ನಿರೀಕ್ಷೆಯ ಕಾತರದ ರೂಪದಲ್ಲಿ ಜಿ.ಎಸ್. ಶಿವರುದ್ರಪ್ಪನವರ ಕವಿತೆಯನ್ನು ನೆನಪಿಸಿಕೊಳ್ಳಬಹುದು: ‘ಗಾಳಿಗಳ ಗೋಳಿನಲಿ ಮೋಡಗಳ ತುಮುಲದಲಿ / ಸೋನೆಗಳ ಮೇಳದಲಿ / ಸಿಕ್ಕು ನರಳುವ ಜಗಕೆ ಎಂದು ಬಿಡುಗಡೆಯಹುದೊ, / ಶ್ರಾವಣದ ಶ್ರೀಗೌರಿಯವತಾರವೆಂದಹುದೊ / ಎಂದು ಕಾದಿದೆ ಜೀವ ಗೂಡಿನೊಳಗೆ! / ಗರಿ ಮುದುರಿ ಕಣ್ಮುಚ್ಚಿ ಮೌನದೊಳಗೆ’.

ನಮ್ಮ ಯಾವ ಪ್ರಯತ್ನವೂ ಇಲ್ಲದಿದ್ದರೂ ಪ್ರಕೃತಿಯಲ್ಲಂತೂ ಶ್ರಾವಣ ಆಗಮನದ ಕುರುಹುಗಳು ತಂತಾನೇ ಕಾಣಿಸುತ್ತವೆ. ಪ್ರಕೃತಿಯ ಭಾಗವಾದ ನಾವು ಆ ಶ್ರಾವಣಕ್ಕೆ ಬೆನ್ನು ಮಾಡುವುದು ಹೇಗೆ? ಶ್ರಾವಣ ಮಾಸ ಸೃಷ್ಟಿಗೆ ಪೋಷಣೆಯ ರೂಪದಲ್ಲಿ ಆಗಮಿಸುತ್ತದೆ ಎನ್ನುತ್ತಾರೆ ಹಿರಿಯರು. ‘ಹರಿತಾವ ಝರಿ / ಹಾಲಿನ ತೊರಿ / ಈಗ ಯಾಕs / ನೆಲಕೆಲ್ಲ ಕುಡಿಸಲಾಕ’ ಎನ್ನುವ ಕವಿಯ ಹಾಡು ನಮ್ಮೊಳಗೀಗ ಮತ್ತೆ ಮತ್ತೆ ಅನುರಣಿಸಿ, ಆ ಹಾಲಿನ ತೊರಿ ಹರಿಯಲಿಕ್ಕೆ ಇರುವ ಅಡೆತಡೆಗಳನ್ನು ಪರಿಹರಿಸುವ ಮಾರ್ಗಗಳನ್ನು ಹುಡುಕಲಿಕ್ಕೆ ಪ್ರೇರಣೆಯಾಗಬೇಕು. ಶ್ರಾವಣದ ಬೆರಳು ಹಿಡಿದು ನಡೆಯಲಿಕ್ಕೆ, ಆ ನಡಿಗೆಯಲ್ಲಿ ನಮ್ಮ ಸಣ್ಣತನಗಳ ಮೀರಲಿಕ್ಕೆ ಪ್ರಕೃತಿಯೊಂದು ಅವಕಾಶ ಒದಗಿಸಿಕೊಟ್ಟಾಗ ಬೇಡವೆನ್ನುವುದುಂಟೆ? ಇದು ಸಮೂಹಗಾನದ ಸಮಯ: “ಶ್ರಾವಣಾ ಬಂತು ಕಾಡಿಗೆ ಬಂತು ನಾಡಿಗೆ ಬಂತು ಬೀಡಿಗೆ ಶ್ರಾವಣಾ ಬಂತು...”

**ಪ್ರತಿಕ್ರಿಯಿಸಿ:** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in

